

ಹಬಲ್ ಅಂತರಿಕ್ಷ ದೂರದರ್ಶಕ

# ಕನ್ನಡ ನುಡಿ ವಿಜ್ಞಾನದ ಗುಡಿ

ಕಳೆದ ಅಕ್ಟೋಬರ್‌ನಲ್ಲಿ 'ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ' ಒಂದು ಜಾಲಗೋಷ್ಠಿ ಏರ್ಪಡಿಸಿತ್ತು. ಕೊರೊನಾದ ಆರ್ಭಟದ ನಡುವೆಯೂ ಗೋಷ್ಠಿಗಳನ್ನು ನಡೆಸಬಹುದು ಎಂದು ಸಾಂಪ್ರದಾಯಿಕ ಕಾರ್ಯಕ್ರಮಗಳಿಗೆ ಸೆಡ್ಡು ಹೊಡೆದು ನಿಂತು ಜನಪ್ರಿಯವಾಗುತ್ತಿರುವ ತಂತ್ರ ಈ 'ವೆಬಿನಾರ್'. ಈ ಜಾಲಗೋಷ್ಠಿಯಲ್ಲಿ (ವೆಬಿನಾರ್‌ನಲ್ಲಿ) ಕನ್ನಡದ ಅನೇಕ ವಿಜ್ಞಾನ ಲೇಖಕರು ಭಾಗವಹಿಸಿದ್ದರು. ವಿಷಯವೂ ಘನವಾದದ್ದೇ: 'ರಾಷ್ಟ್ರೀಯ ಮಟ್ಟದಲ್ಲಿ ವಿಜ್ಞಾನ ಸಂವಹನ ನೀತಿ ತಯಾರಿಸಲು ಯಾವ ಅಂಶಗಳಿಗೆ ಒತ್ತುಕೊಡಬೇಕು' ಎನ್ನುವುದು. ಈ ಗೋಷ್ಠಿಗೆ ಬೆಂಗಳೂರನ್ನೇ ಆಯ್ಕೆಮಾಡಿಕೊಂಡದ್ದರಲ್ಲಿ ಆಶ್ಚರ್ಯಪಡುವಂತಹದ್ದು ಏನೂ ಇರಲಿಲ್ಲ. ಇಡೀ ದೇಶವನ್ನು ಪರಿಗಣಿಸಿದರೆ ಇಲ್ಲಿ ಉನ್ನತ ವಿಜ್ಞಾನ ಸಂಸ್ಥೆಗಳಿವೆ. ಭಾರತೀಯ ವಿಜ್ಞಾನ ಸಂಸ್ಥೆ, ರಾಮನ್ ಸಂಶೋಧನಾ ಸಂಸ್ಥೆ, ಜವಾಹರ್‌ಲಾಲ್ ನೆಹರೂ ಉನ್ನತ ಅಧ್ಯಯನ ಸಂಸ್ಥೆ, ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ (ನಿಯಾಸ್) ಮುಂತಾದವುಗಳು ಇಲ್ಲೇ ಇವೆ. ಅಂದಿನ ಗೋಷ್ಠಿಯಲ್ಲಿ ಚರ್ಚಿಸಿದ್ದು ಕರ್ನಾಟಕವನ್ನು ಕೇಂದ್ರವಾಗಿ ಇಟ್ಟುಕೊಂಡೇ. ವಿಜ್ಞಾನ ಸಂವಹನ ನೀತಿ ರೂಪಿಸಿದರೆ ಅದು ಇಡೀ ದೇಶಕ್ಕೇ ಅನ್ವಯಿಸುವ ಯೋಜನೆಯಾಗುತ್ತದೆ ಎಂಬ ವಿಷಯ. ಚರ್ಚೆಯ ಮಧ್ಯೆ ಒಂದು ಗಂಭೀರ ಪ್ರಶ್ನೆ ಎದ್ದಿತು. ಕರ್ನಾಟಕದಲ್ಲಿ ವಿಜ್ಞಾನಕ್ಕಾಗಿಯೇ ಮುಡಿಪಾಗಿರುವ ಒಂದು ವಾಹಿನಿ ಇದೆಯೇ? ಇದಕ್ಕೆ ಮೌನವೇ ಉತ್ತರ. ಈ ಪ್ರಶ್ನೆಗೆ ಬದಲು, ಯಾವ ಚಾನಲ್ ಜ್ಯೋತಿಷಿಗಳಿಲ್ಲದೆ ನಡೆಯುತ್ತಿದೆ ಎಂದು ಕೇಳಿದ್ದರೆ ಅದಕ್ಕೂ ಮೌನವೇ ಉತ್ತರವಾಗುತ್ತಿತ್ತು. ಇದು ಕರ್ನಾಟಕದ ಸ್ಥಿತಿ ಮಾತ್ರವಲ್ಲ, ಇಡೀ ಭಾರತದಲ್ಲಿ ವಿಜ್ಞಾನಕ್ಕಾಗಿ ಸ್ವತಂತ್ರವಾದ ಯಾವ ಚಾನಲ್ ಕೂಡ ಇಲ್ಲ. ಏಕೆಂದರೆ ಇಂಥ ಚಾನಲ್‌ಗಳು ಟಿ.ಆರ್.ಪಿ. ಹೆಚ್ಚಿಸುವ ಬಾಬತ್ತಲ್ಲ. 'ವಿಗ್ಯಾನ್ ಪ್ರಸಾರಣ್' ಎಂಬ ಸರ್ಕಾರಿ ಸ್ವಾಮ್ಯದ ಸಂಸ್ಥೆ ಕೂಡ ದೂರದರ್ಶನದಲ್ಲಿ ಒಂದಷ್ಟು ಸಮಯವನ್ನು ಕಸಿದು 'ಸೈನ್ಸ್ ಇಂಡಿಯ' ಎಂಬ ಕಾರ್ಯಕ್ರಮವನ್ನು ಪ್ರಸಾರಮಾಡುತ್ತಿದೆ. ಅರ್ಧ ಹಿಂದಿ, ಅರ್ಧ ಇಂಗ್ಲಿಷ್, ಅದೊಂದು ಸಂಕರ ಕಾರ್ಯಕ್ರಮ.

ಇಂದು ಟಿ.ವಿ. ಚಾನಲ್‌ಗಳನ್ನು ಆಧರಿಸಿ ವಿಜ್ಞಾನದ ಜ್ಞಾನ ಹರಡುತ್ತಿಲ್ಲ. ಆದರೆ ವಿದ್ಯುನ್ಮಾನ ಮಾಧ್ಯಮವಾದ ಆಕಾಶವಾಣಿ ಮಾತ್ರ ಸತತವಾಗಿ ವಿಜ್ಞಾನದ ಬಗ್ಗೆ ಒತ್ತುಕೊಟ್ಟು ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಪ್ರಸಾರ ಮಾಡುತ್ತಿದೆ. ವಿಜ್ಞಾನದ ಪ್ರಶ್ನೆ ಬಂದಾಗ ಪ್ರಚಾರ ಸಿಕ್ಕುತ್ತಿರುವುದು ಹೆಚ್ಚಿನ ಪಾಲು ಪತ್ರಿಕೆಗಳಿಂದ,



2000 ಜ್ಯೋತಿರ್ವರ್ಷ ದೂರದಲ್ಲಿರುವ ಈಗಲ್ ನೆಬ್ಯುಲ ವೀಕ್ಷಣೆ